File No.FD/1/BEM/2019-FRC-FINANCE DEPT.SEC

# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 01 ಬಿಇಎಂ 2019 (ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 07.12.2019

## ಸುತ್ತೋಲೆ

ವಿಷಯ: ಸರ್ಕಾರದ ಆಡಳಿತ ವೆಚ್ಚಗಳಲ್ಲಿ ಮಿತವ್ಯಯ ಸಾಧಿಸುವ ಬಗ್ಗೆ- ದೂರವಾಣಿ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 05.11.1998.
2. ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 23.07.1999.
3. ತಿದ್ದೋಲೆ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 31.07.1999.
4. ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 27.01.2000.
5. ತಿದ್ದೋಲೆ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 16.08.2000.
6. ತಿದ್ದೋಲೆ ಸಂಖ್ಯೆ: ಆಇ 04 ಬಿಇಎಂ 2007, ದಿನಾಂಕ: 10.09.2007.
7. ಸರ್ಕಾರದ ಆದೇಶ ಸಂಖ್ಯೆ: ಆಇ 03 ಬಿಇಎಂ 2012, ದಿನಾಂಕ: 08.10.2012.

*****

ಮೇಲಿನ ಉಲ್ಲೇಖ (1)ರಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 05.11.1998ರಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಕಚೇರಿಯ ಮತ್ತು ನಿವಾಸದ ದೂರವಾಣಿ ಹೊಂದಲು ಅರ್ಹತೆಯ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಉಲ್ಲೇಖ(7)ರಲ್ಲಿರುವ ತಿದ್ದೋಲೆ ಸಂಖ್ಯೆ: ಆಇ 03 ಬಿಇಎಂ 2012, ದಿನಾಂಕ: 08.10.2012ರಲ್ಲಿ ಈ ಆದೇಶವನ್ನು ಮಾರ್ಪಡಿಸಿ ರೂ. 36300-53850 ಹಾಗೂ ಮೇಲ್ಪಟ್ಟ ವೇತನ ಶ್ರೇಣಿಯನ್ನು ಹೊಂದಿರುವ ಅಧಿಕಾರಿಗಳು ಕಚೇರಿ ದೂರವಾಣಿಯನ್ನು ಹೊಂದಲು ಅರ್ಹರಿರುತ್ತಾರೆ ಮತ್ತು ರೂ. 40050-56550 ಹಾಗೂ ಮೇಲ್ಪಟ್ಟ ವೇತನ ಶ್ರೇಣಿಯನ್ನು ಹೊಂದಿರುವ ಅಧಿಕಾರಿಗಳು ಕಚೇರಿ ಮತ್ತು ನಿವಾಸದ ದೂರವಾಣಿಯನ್ನು ಹೊಂದಲು ಅರ್ಹರಿರುತ್ತಾರೆ ಎಂದು ತಿಳಿಸಲಾಗಿದೆ.

2. ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗಿರುವುದರಿಂದ ಸದರಿ ತಿದ್ದುಪಡಿಯಲ್ಲಿ ನಿಗದಿಪಡಿಸಲಾದ ವೇತನ ಶ್ರೇಣಿಗಳನ್ನು ಪರಿಷ್ಕರಿಸಬೇಕಾಗುವುದು. ಆದುದರಿಂದ, ಸರ್ಕಾರದ ಆದೇಶ ಸಂಖ್ಯೆ: ಆಇ 02 ಬಿಇಎಂ 98, ದಿನಾಂಕ: 05.11.1998ರ ಉಪ ಶೀರ್ಷಿಕೆ(ಎ) ಮತ್ತು (ಬಿ)ಗಳಲ್ಲಿ ಸೂಚಿಸಿರುವ ವೇತನ ಶ್ರೇಣಿಗಳನ್ನು ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ:

| ಹಳೆಯ ವೇತನ ಶ್ರೇಣಿ | ಪರಿಷ್ಕೃತ ವೇತನ ಶ್ರೇಣಿ | ಅರ್ಹತೆ |
|---|---|---|
| ಶೀರ್ಷಿಕೆ(ಎ)<br>ರೂ. 36300-53850 | 67550-104600 | ಈ ವೇತನ ಶ್ರೇಣಿ ಹೊಂದಿರುವ ಸರ್ಕಾರಿ ಅಧಿಕಾರಿಗಳು ಕಚೇರಿ ದೂರವಾಣಿ ಹೊಂದಲು ಅರ್ಹರಿರುತ್ತಾರೆ. |
| ಶೀರ್ಷಿಕೆ(ಬಿ)<br>ರೂ. 40050-56550 | 74400-109600 | ಈ ವೇತನ ಶ್ರೇಣಿ ಹೊಂದಿರುವ ಸರ್ಕಾರಿ ಅಧಿಕಾರಿಗಳು ಕಚೇರಿ ಹಾಗೂ ನಿವಾಸದ ದೂರವಾಣಿ ಹೊಂದಲು ಅರ್ಹರಿರುತ್ತಾರೆ. |

3. ಇದನ್ನು ದಿನಾಂಕ: 01.04.2019ರಿಂದ ಜಾರಿಗೊಳಿಸತಕ್ಕದ್ದು.

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ)
ಆರ್ಥಿಕ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಣೆಗಾಗಿ.

**ಪ್ರತಿ:**

1. ಮಹಾಲೇಖಪಾಲರು (1) & (2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರು.
4. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ರಾಜ್ಯದ ಸಾರ್ವಜನಿಕ ಉದ್ಯಮಗಳ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳು.
6. ಹೆಚ್ಚುವರಿ ಪ್ರತಿಗಳು.